ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ,
ಉತ್ತರಹಳ್ಳಿ ಉಪವಿಭಾಗ, ಬೆಂಗಳೂರು.

---

ಸಂ:ಸ.ಕಾ.ಅ(ಉ)/ಪಿಆರ್/ /20-21 ದಿನಾಂಕ:

**ದಿನಾಂಕ:02-01-2021ರಂದು ನಡೆದ 184-ಉತ್ತರಹಳ್ಳಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:02-01-2021ರಂದು ಶನಿವಾರ ಅಪರಾಹ್ನ 2.30 ಘಂಟೆಗೆ ವಾರ್ಡ್ ನಂ:184 ಉತ್ತರಹಳ್ಳಿ, ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:**

| ಕ್ರಮಸಂಖ್ಯೆ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀಮತಿ ಚೈತ್ರಾ ಹೊನ್ನಾಪುರ | ಅಧ್ಯಕ್ಷರು ವಾಡ್ ನೋಡಲ್ ಅಧಿಕಾರಿ | ಹಾಜರಿದ್ದವರು |
| 2 | ಶ್ರೀ ಎಂ ಜಿ ಕುಮಾರ್ | ಕಾರ್ಯದರ್ಶಿಗಳು | ಹಾಜರಿದ್ದವರು |
| 3 | ಶ್ರೀ ರವೀಂದ್ರ | ಎ.ಇ.ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದವರು |
| 4 | ಶ್ರೀ ಶಶಿಕುಮಾರ್ | ಆರೋಗ್ಯಾಧಿಕಾರಿ | ಹಾಜರಿದ್ದವರು |
| 5 | ಶ್ರೀ ಡಾ॥ ನಿಖಿಲ್ | ಹೆಲ್ತ್ ಡಿಪಾರ್ಟ್‌ಮೆಂಟ್ | ಹಾಜರಿದ್ದವರು |
| 6 | ಶ್ರೀ ಸಿದ್ದರಾಜು | ವಿದ್ಯುತ್ ವಿಭಾಗ | ಹಾಜರಿದ್ದವರು |
| 7 | ಶ್ರೀ ಸುದರ್ಶನ್ ಎಂ.ಪಿ | ಎ.ಇ.ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದವರು |
| 8 | ಶ್ರೀ ಅನಿಲ್ ಕುಮಾರ್ | ಬೆಸ್ಕಾಂ .ಎ.ಇ | ಹಾಜರಿದ್ದವರು |

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

**ಸಭೆಯ ನಡುವಳಿಗಳು:-**

- ಸಭೆಯನ್ನು ಉದ್ದೇಶಿಸಿ ನೋಡಲ್ ಅಧಿಕಾರಿಗಳು ಕೋವಿಡ್-19 ಸಾಂಕ್ರಾಮಿಕ ರೋಗ ಹಿನ್ನೆಲೆ ವಾರ್ಡ್ ಮಟ್ಟದಲ್ಲಿ ತೆಗೆದುಕೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ವಿಚಾರಿಸಿದರು ಸಭೆಯಲ್ಲಿ ಉಪಸ್ಥಿತರಿಂದ ಆರೋಗ್ಯಾಧಿಕಾರಿಗಳು ಕೋವಿಡ್-19, ಟೆಸ್ಟಿಂಗ್ ವಾರ್ಡ್ ಮಟ್ಟದಲ್ಲಿ ಪ್ರತಿದಿನ ನಡೆಸಲಾಗುತ್ತಿದ್ದು, ಒಟ್ಟಾರೆ ವಾರ್ಡ್ ಮಟ್ಟದಲ್ಲಿ ಏಳು ಕೋವಿಡ್ ಟೆಸ್ಟಿಂಗ್ ಕ್ಯಾಂಪ್‌ಗಳನ್ನು ಹಾಕಲಾಗಿದ್ದು, ಒಂದು ಮೊಬೈಲ್ ಕ್ಯಾಂಪ್ ಕಾರ್ಯನಿರ್ವಹಿಸುತ್ತಿದ್ದು ಕೋವಿಡ್ ಟೆಸ್ಟಿಂಗ್ ಪ್ರಕ್ರಿಯೆಯನ್ನು ನಡೆಸಲಾಗುತ್ತಿರುವುದಾಗಿ ಆರೋಗ್ಯಾಧಿಕಾರಿಗಳು ತಿಳಿಸುತ್ತಾರೆ. ಪ್ರತಿದಿನ ಸುಮಾರು 420 ಟೆಸ್ಟಿಂಗ್ ನಡೆಸಲಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. ಸಭೆಯಲ್ಲಿ ಉಪಸ್ಥಿತರಿರುವ ಆರ್.ಡಬ್ಲ್ಯೂ. ಎ ಸದಸ್ಯರು ಮುಖ್ಯರಸ್ತೆಗಳಲ್ಲಿ ಕ್ಯಾಂಪ್ ಹಾಕಿ ಮಾಸ್ ಮಾನಿಟರಿಂಗ್ ಮಾಡುವಲ್ಲಿ ಸಮನ್ವಯದ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು. ವಾರ್ಡ್ ಮಟ್ಟದಲ್ಲಿನ ಕಂದಾಯ ಅಧಿಕಾರಿಗಳೊಡನೆ ಸಮನ್ವಯ ಸಾಧಿಸಿ ಟೆಸ್ಟಿಂಗ್ ಮಾಡಿಸಲು ಜನರನ್ನು ಕರೆತರಲು ಸೂಚಿಸಲಾಗಿದ್ದು,
- ವಾರ್ಡ್ ವ್ಯಾಪ್ತಿಯ ಆರೋಗ್ಯ ಅಧಿಕಾರಿಗಳು, ಸೂಪರ್ ವೈಸರ್ ಉಪಸ್ಥಿತರಿದ್ದು, ಘನತ್ಯಾಜ್ಯ ವಿಷಯವಾಗಿ ಬ್ಲಾಕ್ ಸ್ಪಾಟ್‌ಗಳನ್ನು ಪ್ರತಿದಿನ ಪರಿವೀಕ್ಷಿಸಿ, ಅದನ್ನು ನಿರ್ಮೂಲನೆ ಮಾಡುವಲ್ಲಿ ಕ್ರಮವಹಿಸಲು ಸೂಚಿಸಲಾಯಿತು.
- ಹಸಿ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಬೇರ್ಪಡಿಸುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಆರೋಗ್ಯಾಧಿಕಾರಿಗಳು ಆರ್. ಡಬ್ಲ್ಯೂ ಎ ಸದಸ್ಯರೊಡನೆ ಸಮಾಲೋಚಿಸಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಸಭೆಯಲ್ಲಿ ಸೂಚಿಸಲಾಯಿತು.
- ವಾರ್ಡ್ ಮಟ್ಟದಲ್ಲಿ ಪ್ರತಿ ಮನೆಯಲ್ಲಿ ಹಸಿ ಮತ್ತು ಒಣ ತ್ಯಾಜ್ಯ ಪ್ರತ್ಯೇಕವಾಗಿ ಸಂಗ್ರಹಣೆ ಆಗುತ್ತಿರುವ ಬಗ್ಗೆ ಹಾಗೂ ಆಟೋ ಟಿಪ್ಪರ್/ತಳ್ಳುವ ಗಾಡಿ ಮನೆಮನೆಗೆ ತಲುಪುತ್ತೀರುವ ಬಗ್ಗೆ ಆರೋಗ್ಯಾಧಿಕಾರಿಗಳು ಹಾಗೂ ಸೂಪರ್ ವೈಸರ್‌ಗಳು ಗಮನಹರಿಸಲು ಕ್ರಮ ತೆಗೆದುಕೊಳ್ಳಲು ನೂಡಲ್ ಅಧಿಕಾರಿಗಳು ಸೂಚಿಸಿದರು.
- ವಾರ್ಡ್ ಸಹಾಯಕ ಅಭಿಯಂತರರು ಸಭೆಯಲ್ಲಿ ಉಪಸ್ಥಿತರಿದ್ದು, ವಾರ್ಡ್ ಮಟ್ಟದಲ್ಲಿ ರಸ್ತೆ ಗುಂಡಿ ಪೀಲಿಂಗ್ ಮತ್ತು ಹ್ಯಾಸ್‌ಪಾಲ್ಟಿಂಗ್ ಮತ್ತು ಡಿಸ್‌ಪಾಲ್ಟಿಂಗ್ ಕಾರ್ಯಗಳು ನಡೆಯಲಾಗುತ್ತಿರುವುದಾಗಿ ತಿಳಿಸಿರುತ್ತಾರೆ.
- ಎ.ಜಿ.ಎಸ್ ಲೇಔಟ್ ಯು.ಜಿ.ಡಿ ಲೈನ್ ರಸ್ಟೋರೇಷನ್ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಲಾಯಿತು.

| | |
|---|---|
| ಕಾರ್ಯದರ್ಶಿ | ಅಧ್ಯಕ್ಷರು |
| ವಾರ್ಡ್ ನಂ:184 ಉತ್ತರಹಳ್ಳಿ | ವಾರ್ಡ್ ನಂ:184 ಉತ್ತರಹಳ್ಳಿ |

Scanned with CamScanner

- ಉತ್ತರಹಳ್ಳಿ ಬೆಂಗಳೂರು ಒನ್ ಬಳಿ ಸ್ಯಾನಿಟರಿ ಚರಂಡಿ ಮುಖಾಂತರ ನೀರು ಹೊರಬರುತ್ತಿದ್ದು, ಸದರಿ ದುರ್ವ್ಯವಸ್ಥೆಯನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಇತರ ಇಲಾಖೆಗಳ ಕಾರ್ಯವ್ಯಾಪ್ತಿ ಇದ್ದಲ್ಲಿ, ಪರಿಶೀಲಿಸಿ ಕ್ರಮವಹಿಸಲು ಸೂಚಿಸಲಾಯಿತು.
- ಹನುಮಗಿರಿ ಪ್ರದೇಶ ಸಮೀಪ ಓ.ಎಫ್.ಸಿ ಕಾರ್ಯ ಸಂಬಂಧಿಸಿದಂತೆ ರೆಸ್ಟೋರೇಷನ್ ಸಮರ್ಪಕವಾಗಿ ನಿರ್ವಹಿಸಲು ಸೂಚಿಸಲಾಯಿತು.
- ಯಾವುದೇ ರಸ್ತೆ ಅಗೆತ ಕಾರ್ಯಗಳನ್ನು ಬೆಸ್ಕಾಂ ವತಿಯಿಂದ ತೆಗೆದುಕೊಂಡಿದ್ದಲ್ಲಿ ಯು.ಜಿ.ಡಿ ಲೈನ್‌ನಿಂದ 3 ಅಡಿ ಅಂತರದಲ್ಲಿ ಇರುವಂತೆ ಗಮನವಹಿಸಿ ಕಾರ್ಯಗಳನ್ನು ಸಂಬಂಧಪಟ್ಟ ಬೆಸ್ಕಾಂ ಅಭಿಯಂತರರು ಗಮನಿಸಿ ಮೇಲ್ವಿಚಾರ ನಡೆಸಲು ಸೂಚಿಸಲಾಯಿತು. ಮುಂದುವರೆದಂತೆ ಸದರಿ ಕಾರ್ಯಗಳು ನಿರ್ವಹಿಸುವ ಸಮಯದಲ್ಲಿ ಪವರ್ ಕಟ್ ರೆಸ್ಟೋರೇಷನ್‌ಗೆ ಸಂಬಂಧಿಸಿದಂತೆ ಗಮನಹರಿಸಲು ಸೂಚಿಸಲಾಯಿತು.
- ವಾರ್ಡ್ ಮಟ್ಟದಲ್ಲಿಯ ವಾಣಿಜ್ಯ ಸಂಕೀರ್ಣಗಳಲ್ಲಿ ತ್ಯಾಜ್ಯ ಸಂಗ್ರಹಣೆ ವಿಷಯವಾಗಿ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು. ಮುಂದುವರೆದಂತೆ ಮಾಕ್ಸ್ ಧರಿಸುವ ಸಂಬಂಧ ಅರಿವು ಮೂಡಿಸುವ ಬಗ್ಗೆ ಕಾರ್ಯ ಹಮ್ಮಿಕೊಳ್ಳಲು ಸೂಚಿಸಲಾಯಿತು.
- ಸಭೆಯಲ್ಲಿ ಉಪಸ್ಥಿತರಿದ್ದ ಸಹಾಯಕ ಅಭಿಯಂತರರಿಗೆ ಹಿಂದಿನ ಸಭೆಯಲ್ಲಿ ಸೂಚಿಸಿದಂತೆ ವಾರ್ಡ್ ಮಟ್ಟದಲ್ಲಿ ವಿವಿಧ ಇಲಾಖೆಗಳ ಕಾರ್ಯಗಳ ಕುರಿತು ಅನುಮೋದನೆಗೊಂಡಿರುವ ಒಟ್ಟು ಕಾರ್ಯಗಳ ಸಮಗ್ರ ವರದಿಯನ್ನು ನೀಡಲು ಸೂಚಿಸಲಾಯಿತು.

ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿ | ಅಧ್ಯಕ್ಷರು |
| ವಾರ್ಡ್ ನಂ:184 ಉತ್ತರಹಳ್ಳಿ | ವಾರ್ಡ್ ನಂ:184 ಉತ್ತರಹಳ್ಳಿ |

Scanned with CamScanner

ಪ್ರತಿಯನ್ನು:–

1. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಅವಗಾಹನೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
5. ಮುಖ್ಯ ಆರೋಗ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ ರವರಿಗೆ.
6. ವೈದ್ಯಕೀಯ ಆರೋಗ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ.
7. ಅಧೀಕ್ಷಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಅವಗಾಹನೆಗೆ ಸಲ್ಲಿಸಿದೆ.
8. ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)
10. ಕಾರ್ಯಪಾಲಕ ಅಭಿಯಂತರರು (ಮೇಜರ್ ರೋಡ್ಸ್)
11. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ
12. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ
13. ಕಛೇರಿ ಪ್ರತಿ.

Scanned with CamScanner